# ಶಿವರಾಮ ಕಾರಂತರ ಕಾದಂಬರಿಗಳು: ಕಥಾವಸ್ತು

**ಮಂಜುನಾಥ ಟಿ.**
ಸಂಶೋಧನಾರ್ಥಿ
ಕನ್ನಡಭಾರತಿ, ಕುವೆಂಪು ವಿಶ್ವವಿದ್ಯಾಲಯ
manjumt94@gmail.com

**ಕಿರು ಮಾಹಿತಿ**

ಶಿವರಾಮ ಕಾರಂತರ ಕೆಲ ಕಾದಂಬರಿಗಳನ್ನು ಹೊರತುಪಡಿಸಿದರೆ ಉಳಿದಂತೆ ಅವರ ಎಲ್ಲಾ ಬರಹಗಳ ಜೀವಕೇಂದ್ರವೇ ಗ್ರಾಮೀಣ ಬದುಕು ಮತ್ತು ದಕ್ಷಿಣಕನ್ನಡದ ಕೆಳಜಾತಿ ಸಮುದಾಯಗಳು. ಮರಳಿಮಣ್ಣಿಗೆ, ಅಳಿದ ಮೇಲೆ, ಬೆಟ್ಟದಜೀವ, ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಬದುಕು ಮತ್ತು ಬದುಕಿನ ಕ್ರಮಗಳನ್ನು ಕಾರಂತರು ಓದುಗರ ಮುಂದೆ ತೆರೆದಿಟ್ಟಿದ್ದಾರೆ. ಆಧುನಿಕತೆಯ ಹೆಸರಿನಲ್ಲಿ ಭಾರತೀಯ ಗ್ರಾಮ ಸಮಾಜದಲ್ಲಿ ತರುತ್ತಿರುವ ಬದಲಾವಣೆಗಳು ಹೇಗೆ ಮನುಷ್ಯ ಮತ್ತು ನಿಸರ್ಗವನ್ನು ಅವನತಿಯ ದಾರಿಯತ್ತ ಒಯ್ಯುತ್ತಿವೆ ಎಂಬ ವಿಷಯವೇ ಕಾರಂತರ ಕಾದಂಬರಿಗಳಿಗೆ ಮೂಲವಸ್ತುವಾಗಿರುವುದನ್ನು ಈ ಲೇಖನದಲ್ಲಿ ಗಮನಿಸಬಹುದು. ಶಿವರಾಮ ಕಾರಂತರ ಕಾದಂಬರಿಗಳು ರೂಪಿಸಿರುವ ಆಶಯಗಳು ಮತ್ತು ತಾತ್ವಿಕತೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ಅವರ ಪ್ರಮುಖ ಗಮನಾರ್ಹ ಕಾದಂಬರಿಗಳನ್ನು ಪರಿಶೀಲಿಸುವ ಉದ್ದೇಶವಾಗಿದೆ. ಆದ್ದರಿಂದ ಈ ಸಮೀಕ್ಷೆ ಅಪೂರ್ಣ, ಅಸಮಗ್ರ, ಅಸಂತುಲಿತವಾಗಿರುವುದು ಅನಿವಾರ್ಯ ಆದರೂ ಈ ಮಿತಿಯಲ್ಲಿ ಅವರ ಒಲವುಗಳು ಹಿಂದಿನ ತಾತ್ವಿಕತೆ ಅದಕ್ಕೆ ಕಾರಣವಾದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಸನ್ನಿವೇಶ, ವಿಶ್ವದ ವಿಭಿನ್ನ ಭಾಷಾ ಕಾದಂಬರಿಗಳ ಓದಿನ ಪರಿಣಾಮ, ವಸಾಹತೋತ್ತರ ಚಿಂತನೆಗಳು, ಮುಂತಾದವುಗಳನ್ನು ಇಲ್ಲಿ ಗುರುತಿಸುವ ಕಿರು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

---

ಕಳೆದ 1950–2000 ಅವಧಿಯಲ್ಲಿ ಎರಡು ಸಾವಿರಕ್ಕಿಂತ ಹೆಚ್ಚು ಕಾದಂಬರಿಗಳು ಪ್ರಕಟವಾಗಿವೆ. ಎಲ್ಲಾ ಕಾದಂಬರಿಗಳನ್ನು ಗಮನಿಸುವುದಿರಲಿ ನೂರಾರು ಸಂಖ್ಯೆಯ ಗಮನಾರ್ಹ ಮುಖ್ಯ ಕೃತಿಗಳನ್ನು ನೋಡಲಾಗಿಲ್ಲ. ಈ ಅವಧಿಯಲ್ಲಿ ನಡೆದ ಸಾಹಿತ್ಯ ಚಳುವಳಿಗಳು, ಪ್ರಮುಖ ಒಲವುಗಳು, ಕಾದಂಬರಿಗಳನ್ನು ರೂಪಿಸಿರುವ ಆಶಯಗಳು ಮತ್ತು ತಾತ್ವಿಕತೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ಈ ಅವಧಿಯ ಪ್ರಮುಖ ಗಮನಾರ್ಹ ಕಾದಂಬರಿಗಳನ್ನು ಪರಿಶೀಲಿಸುವ ಉದ್ದೇಶವಾಗಿದೆ. ಆದ್ದರಿಂದ ಈ ಸಮೀಕ್ಷೆ ಅಪೂರ್ಣ, ಅಸಮಗ್ರ, ಅಸಂತುಲಿತವಾಗಿರುವುದು ಅನಿವಾರ್ಯ ಆದರೂ ಈ ಮಿತಿಯಲ್ಲಿ ಈ ಅವಧಿಯಲ್ಲಿ ಬಂದ ಒಲವುಗಳು ಹಿಂದಿನ ತಾತ್ವಿಕತೆ ಅದಕ್ಕೆ ಕಾರಣವಾದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಸನ್ನಿವೇಶ, ವಿಶ್ವದ ವಿಭಿನ್ನ ಭಾಷಾ ಕಾದಂಬರಿಗಳ ಓದಿನ ಪರಿಣಾಮ, ವಸಾಹತೋತ್ತರ ಚಿಂತನೆಗಳು, ಮುಂತಾದವುಗಳು ಈ ಕಾಲು ಶತಮಾನದ ಕಾದಂಬರಿಗೆ ಯಾವ ಯಾವ ಆಯಾಮಗಳನ್ನು ಕೊಟ್ಟವು ಎಂಬುದನ್ನು ಗುರುತಿಸುವ ಕಿರು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ಅವಧಿಯ ಕಾದಂಬರಿಗಳು ಸಾಮಾಜಿಕ, ಸಾಂಸ್ಕೃತಿಕ ವಿಶ್ಲೇಷಣೆ ಮತ್ತು ವಿಮರ್ಶೆಗೆತೊಡಗಿವೆ. ನವೋದಯದ ಕಾದಂಬರಿಗಳಲ್ಲಿಯೂ ಈ ಪ್ರವೃತ್ತಿಯಿದ್ದರೂ ಅದು

ವಿಮರ್ಶೆಗಿಂತ ಆದರ್ಶಗಳ ಮೇಲೆ ಹೆಚ್ಚಿನ ಒತ್ತನ್ನು ಹಾಕಿತು. ವಾಸ್ತವವನ್ನು ಅದರ ಹಿಂದೆ ಕ್ರಿಯಾಶೀಲವಾಗಿರುವ ಶಕ್ತಿಗಳನ್ನು ಅವುಗಳ ಸ್ಥೂಲ, ಸೂಕ್ಷ್ಮ ಪರಿಣಾಮಗಳನ್ನು, ಅವುಗಳಿಗೆ ಕಾರಣವಾಗಿರುವ ಸಾಂಸ್ಕೃತಿಕ ಸಂದರ್ಭವನ್ನು ಮಾನವತಾವಾದಿ ನೆಲೆಯಲ್ಲಿ ಗ್ರಹಿಸಿ, ಒಂದು ಜೀವಪರ ಸಂಸ್ಕೃತಿಯ ವ್ಯವಸ್ಥೆಯ ಸ್ವರೂಪವನ್ನು ಗುರುತಿಸುವ ಮತ್ತು ಚಾರಿತ್ರಿಕ ಒತ್ತಡದಿಂದಾಗುತ್ತಿರುವ ಸೂಕ್ಷ್ಮ–ಸ್ಥೂಲ ಬದಲಾವಣೆಗಳನ್ನು ಪ್ರಕ್ರಿಯೆಯ ದಾಖಲೆ ಅನ್ಯಪಂಥ ಚಳುವಳಿಗಳು ಧನಾತ್ಮಕ ಅಂಶಗಳನ್ನು ಮೈಗೂಡಿಸಿಕೊಂಡು ತಮ್ಮ ಗ್ರಹಿಕೆ, ಸೂಕ್ಷ್ಮತೆಯ ಮೊನಚನ್ನು ತಂದುಕೊಂಡರು. ತಮ್ಮ ಬೆನ್ನ ಹಿಂದಿನ ಚಳುವಳಿಗಳ ಮತ್ತು ಜತೆಯಲ್ಲಿ ಬೆಳೆಯುತ್ತಿರುವ ಚಳುವಳಿಗಳ ನಡುವಿನ ಅಂತರ ಸಂಬಂಧವನ್ನು ಮತ್ತು ಭಿನ್ನ ಒಲವಿನ ಕೃತಿಗಳನ್ನು ಸಮತೂಕದಲ್ಲಿ ಗ್ರಹಿಸಲು ಸಾಧ್ಯವಾದದ್ದೂ ಈ ಕಾಲಘಟ್ಟದಲ್ಲಿಯೇ. ಈ ಗ್ರಹಿಕೆಗೆ ನಮ್ಮ ರಾಜಕೀಯ ಸಾಂಸ್ಕೃತಿಕ ಸಂಧರ್ಭ ಮತ್ತು ಸಂಸ್ಕೃತಿಯನ್ನು ಬೇರೆ ಬೇರೆ ನೆಲೆಗಳಲ್ಲಿ ಗ್ರಹಿಸುವಂತೆ ಮಾಡಿತು. ದೇಶದ ಉದ್ದಗಲಕ್ಕೂ ಹಬ್ಬಿದ ಜಾತಿ, ಧರ್ಮದ್ವೇಷ, ಸಹಬಾಳ್ವೆ, ಸಹನೆ ಮುಂತಾದ ಪ್ರಜಾಪ್ರಭುತ್ವದ ಮೌಲ್ಯಗಳು ಅಪ್ರಸ್ತುತವಾದದ್ದು ಬಹುಸಂಸ್ಕೃತಿ, ಬಹುತ್ವದ ಕಲ್ಪನೆ ಅದನ್ನು ಸಾಂಸ್ಕೃತಿಕ ನೆಲೆಯಲ್ಲಿ ಗುರುತಿಸಿ, ಬೆಳೆಸುವ ಆಶಯ ಸ್ತ್ರೀಯರನ್ನು ದೇವತೆಗಳ ಸ್ಥಾನಕ್ಕೇರಿಸುವ ಮಾತನಾಡುತ್ತಲೇ ಅವರನ್ನು ಕೆಲವೇ ಕ್ಷೇತ್ರಗಳಿಗೆ ಸೀಮಿತಗೊಳಿಸುವ ಹುನ್ನಾರ, ಶೋಷಣೆ ನಿರಂತರಗೊಳ್ಳುವುದಕ್ಕೆ ಕಾರಣವಾಗಿರುವ ಆರ್ಥಿಕ ಅಸಮಾನತೆ ಬಡತನ – ಅಜ್ಞಾನ, ಮೌಢ್ಯ, ವಿದ್ಯಾಭ್ಯಾಸಕ್ಕೆ ಅವಕಾಶವಿಲ್ಲದಿರುವುದು ಇವೇ ಮುಂತಾದವು ಪ್ರಭಾವ ಬೀರಿದವು. ಇಂಥ ಹಲವಾರು ಸಂಗತಿಗಳು ನಮ್ಮ ಕಾದಂಬರಿಕಾರರ ಗ್ರಹಿಕೆಯನ್ನು ರೂಪಿಸಿರುವುದನ್ನು ಆ ಗ್ರಹಿಕೆ ಅವರ ಕಾದಂಬರಿಗಳ ವಿಶಿಷ್ಟ ವಿನ್ಯಾಸ– ಆಕೃತಿಗಳಿಗೆ ಕಾರಣವಾಗಿರುವುದನ್ನು, ಅವುಗಳ ಮೂಲಕ ಕಂಡುಕೊಳ್ಳಬಹುದಾಗಿದೆ. ಕಾರಂತರ ನಿರ್ಗಮನವು ಅವರು ತಮ್ಮ ಕೃತಿಗಳಲ್ಲಿ ಹಿಡಿಯ ಹೊರಟಿದ್ದ ಬದುಕಿನ ನಿಗೂಢತೆಯ ಮುಂದುವರೆದ ಶೋಧದಂತೆ ತೋರುತ್ತದೆ. ಕಾರಂತರ ಗೈರುಹಾಜರಿಯು ಕನ್ನಡ ಭಾಷೆಯಲ್ಲಿ ಉಂಟು ಮಾಡಿರುವ ಭಾವಶೂನ್ಯವನ್ನು ಇನ್ನು ಮುಂದೆ ಅವರು ಬಿಟ್ಟುಹೋಗಿರುವ ಕಥನಗಳ ಮರು ಓದಿನ ಮೂಲಕವೇ ತುಂಬಿಕೊಳ್ಳಬೇಕು. ಕಾರಂತರ ಅವರ ಎಲ್ಲಾ ಬರಹಗಳು ಗ್ರಾಮೀಣ ಸಮಾಜವನ್ನು ಕೇಂದ್ರ ಮಾಡಿಕೊಂಡಿವೆ. ಆಧುನಿಕತೆಯ ಪರಿಣಾಮಗಳು ಪ್ರಾಕೃತಿಕ ಪರಿಸರ ಮತ್ತು ಮಾನವ ಪರಿಸರಗಳಲ್ಲಿ ಉಂಟು ಮಾಡುತ್ತಿರುವ ಪಲ್ಲಟಗಳಿಂದ ಸೃಷ್ಟಿಯಾಗುತ್ತಿರುವ ಬಿರುಕುಗಳನ್ನು ಹಿಡಿಯಲು ನಿರಂತರವಾಗಿ ಪ್ರಯತ್ನಿಸಿವೆ. ಹೀಗಾಗಿ ಕಳೆದ 60 ವರ್ಷಗಳ ಕನ್ನಡ ನಾಡಿನ ಸಮಾಜಶಾಸ್ತ್ರ ಮತ್ತು ಜೀವಪರಿಸರದ ಬದಲಾವಣೆಗಳನ್ನು ಅಧ್ಯಯನ ಮಾಡುವವರಿಗೆ ಕಾರಂತರ ಅವರ ಕೃತಿಗಳು ಆಕರ ಗ್ರಂಥಗಳಾಗಿ ಒದಗಿಬರುತ್ತವೆ. ಆಧುನಿಕತೆಯನ್ನು ಬಹುಪಾಲು ವಿದ್ಯಾವಂತರು ಪುಸ್ತಕಗಳ ಓದಿನ ಮೂಲಕ ಗ್ರಹಿಸುತ್ತ ಇರುವಾಗ ಕಾರಂತರು ಕಾಡಿನಲ್ಲಿ ಕಣ್ಮರೆಯಾಗುತ್ತಿದ್ದ ಜೀವಗಳು – ಸಸ್ಯಗಳನ್ನು ಗಮನಿಸುವ ಮೂಲಕ ರೈತ ಸಮುದಾಯ ಮತ್ತು ಭೂಮಿಯ ನಡುವಿನ ಹೊಕ್ಕಳ ಬಳ್ಳಿ ಸಂಬಂಧ ಕಡಿದು ಹೋಗುತ್ತಿರುವ ನೆಲೆಗಳನ್ನು ಗುರುತಿಸಿ ದಾಖಲಿಸುವ ಮೂಲಕ ಗ್ರಹಿಸುತ್ತಿದ್ದರು. ಸ್ವಾತಂತ್ರ್ಯಾನಂತರದಲ್ಲಿ ಶಿಕ್ಷಣದಿಂದ ದಕ್ಕಿದ ತಿಳುವಳಿಕೆಯ ಬಗ್ಗೆ ಆಳದಲ್ಲಿ ಅಪನಂಬಿಕೆ ಇದ್ದುದ್ದನ್ನು ಕಾರಂತರ ಎಲ್ಲಾ ಬರಹಗಳಲ್ಲಿ ಗುರುತಿಸಬಹುದು. ಅದು ತಿಳುವಳಿಕೆಯ ಜ್ಞಾನದ ಅರಿವಿನ ಒಳಗೆ ತಾನು ಹೇಗೆ ಅದನ್ನು ಗ್ರಹಿಸಿದ್ದೇನೆ ಎಂಬುದರ ಮೇಲೆ ಇದಕ್ಕೆ ಮರಳಿಮಣ್ಣಿಗೆಯಲ್ಲಿ ಲಚ್ಚ ಮತ್ತು ರಾಮನನ್ನು ಮುಖಾಮುಖಿಯಾಗಿಸಿದರೇ ಇದಕ್ಕೆ ಅತ್ಯುತ್ತಮ ಉದಾಹರಣೆ ಭವಿಷ್ಯವನ್ನು ನೆರ್ಮಗೊಳಿಸಲೆಂದೇ ವರ್ತಮಾನದ ಸಂಕಟಗಳಿಗೆ ಕಾರಣವನ್ನು ಶೋಧಿಸುವ ಕಾರಂತರ ಬರಹಗಳು ತಮ್ಮ ಸಮುದಾಯ ನಿಷ್ಠೆ ಕಾಳಜಿಯಿಂದ ಭೂತವನ್ನು ಶೋಧಿಸುತ್ತಾ ವರ್ತಮಾನವನ್ನು ಮುಖಹೀನವಾಗಿಸುತ್ತಿರುವ ಘನ ಪಾಂಡಿತ್ಯದ ಲೇಖಕರನ್ನು, ಅವರ ವಿಕೃತಿಗಳನ್ನು ಅನಾವರಣಗೊಳಿಸಿವೆ ಎಂಬುದು ಬಹುಮುಖ್ಯವಾದ ಸಂಗತಿ.

ಯಾವಾಗಲೂ ಕ್ರಿಯಾಶೀಲವಾಗಿ ಅನ್ವೇಷಣೆಯ ಗುಣವನ್ನು ಹೊಂದಿದ್ದಕಾರಂತರ ಒಳಗೆ ಬಹುದೊಡ್ಡ ಗ್ರಾಮೀಣ ಸಮುದಾಯಗಳು ಜೀವಂತವಿದ್ದವು. ಅವರ ಕೆಲ ಕಾದಂಬರಿಗಳನ್ನು ಹೊರತುಪಡಿಸಿದರೆ ಉಳಿದಂತೆ ಅವರ ಎಲ್ಲಾ ಬರಹಗಳ ಜೀವಕೇಂದ್ರವೇ ಗ್ರಾಮೀಣದ ಬದುಕು ಮತ್ತು ದಕ್ಷಿಣಕನ್ನಡದ ಕೆಳಜಾತಿ ಸಮುದಾಯಗಳು, ಮರಳಿಮಣ್ಣಿಗೆ, ಅಳಿದ ಮೇಲೆ, ಬೆಟ್ಟದಜೀವ, ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಬದುಕು ಮತ್ತು ಬದುಕಿನ ಕ್ರಮಗಳನ್ನು ಕಾರಂತರು ಓದುಗರ ಮುಂದೆತೆರೆದಿಟ್ಟಿದ್ದಾರೆ. ಆಧುನಿಕತೆಯ ಹೆಸರಿನಲ್ಲಿ ಭಾರತೀಯ ಗ್ರಾಮ ಸಮಾಜದಲ್ಲಿ ತರುತ್ತಿರುವ ಬದಲಾವಣೆಗಳು ಹೇಗೆ ಮನುಷ್ಯ ಮತ್ತು ನಿಸರ್ಗವನ್ನು ಅವನತಿಯ ದಾರಿಯತ್ತ ಒಯ್ಯುತ್ತಿವೆ ಎಂಬ ವಿಷಯವೇ ಕಾರಂತರ ಕಾದಂಬರಿಗಳಿಗೆ ಮೂಲವಸ್ತುವಾಗಿರುವುದನ್ನು ಗಮನಿಸಬಹುದು. ಇವು ಗ್ರಾಮ ಸಮುದಾಯಕ್ಕೆ ಹೊರಗಿನ ಒತ್ತಡಗಳಾಗಿರುವಂತೆ ಹಳ್ಳಿಗಳ ಒಳಗಿನ ಒತ್ತಡಗಳಾದ ಜಾತಿ ಮತ್ತು ಧಾರ್ಮಿಕ ವ್ಯವಸ್ಥೆಗಳು ಕೂಡ ಈ ಅವನತಿಯನ್ನು ತೀವ್ರಗೊಳಿಸುತ್ತಿರುವ ವಿನ್ಯಾಸಗಳನ್ನು ಕಾರಂತರಂತೆ ನಿರೂಪಿಸಿದ ಲೇಖಕರು ಕನ್ನಡದಲ್ಲಿ ವಿರಳ. ಹಳ್ಳಿಯ ಜೀವನ ಕ್ರಮಗಳನ್ನು ಸಂಬಂಧಗಳನ್ನು ಅವುಗಳ ಸಹಜ ನೆಲೆಗಳಲ್ಲಿ ನಿರೂಪಿಸಲು ಕಾರಂತರು ಯಶಸ್ವಿಯಾದದ್ದರಿಂದ ಅವರ ಬರಹಗಳಿಗೆ ವಿಚಿತ್ರವಾದ ವೈನೋಧಿಕಗುಣ ಪ್ರಾಪ್ತವಾಗಿದೆ. ಈ ಲಕ್ಷಣವನ್ನು ವಿಮರ್ಶಕರು ಕಥನ ತಂತ್ರವೆಂಬಂತೆ ವಿವರಿಸಿದ್ದಾರೆ. ಆದರೆ ಹಳ್ಳಿಗಳ ಜೀವನ ಕ್ರಮಗಳಲ್ಲಿ ಸ್ಥಾಯಿಯಾಗಿರುವ ಈ ವೈನೋಧಿಕತೆಯನ್ನು ಗ್ರಹಿಸಿ ಅಭಿವ್ಯಕ್ತಿಸುವುದು ಯಾವುದೇ ಬರಹಗಾರನಿಗೆ ಬಹುದೊಡ್ಡ ಸವಾಲು. ಅದನ್ನು ಕಾರಂತರು ಸಾಧಿಸಿರುವ ರೀತಿಯೇ ಒಂದು ವಿಶಿಷ್ಟವಾದ ಅಭಿವ್ಯಕ್ತ ಮಾರ್ಗವಾಗಿ ರೂಪುಗೊಂಡಿರುವುದು ಕನ್ನಡ ಭಾಷೆಯ ಪುಣ್ಯ ವಿಶೇಷವಾಗಿದೆ.

ನಿಸರ್ಗವೇ ನಮ್ಮ ಎದುರಿಗೆ ಸುರುಳಿ ಬಿಚ್ಚಿಕೊಂಡು ಸಾಗುತ್ತಿದ್ದಂತಹ ಅನುಭವ ಕಾರಂತರ ಕೃತಿಗಳನ್ನು ಓದುವಾಗ ಲಭಿಸುತ್ತದೆ. ಅನೇಕ ವೇಳೆ ಕಲೆಯ ನಿರ್ಮಿತಿಗಿಂತ ನಿಸರ್ಗದ ಆವಿಸ್ಕೃತಿ ಹೆಚ್ಚು. ಇಲ್ಲಿ ನಿರ್ಸಗವೆಂದರೆ ಕಡಲು, ಬೆಟ್ಟ, ಹೊಳೆ, ರಸ್ತೆ ಮೊದಲಾದ ಅಚೇತನ ಪ್ರಕೃತಿ ಮಾತ್ರವಲ್ಲ ವಿವಿಧ ವಿಚಿತ್ರವಾದ ಮಾನವ ಪ್ರಕೃತಿಯು ಅವರ ಕೃತಿಗಳಲ್ಲಿ ಹಾಸುಹೊಕ್ಕಾಗಿ ಸೇರುತ್ತದೆ. ನಮ್ಮ ಸಾಮಾಜಿಕ ಜೀವನದ ರೋಗರುಜಿನಗಳಿಗೆ ಕಾದಂಬರಿಯ ಮೂಲಕ ಔಷಧ ಕೊಟ್ಟವರು ಕಾರಂತರು. ರಾಜಕೀಯ ಆಂದೋಲನಗಳನ್ನು ಯಥಾವತ್ತಾಗಿ ಚಿತ್ರಿಸಿ ಬದುಕಿಗೊಂದು ಬಣ್ಣ ತಂದು ಕೊಟ್ಟವರು ಕಾರಂತರು. ಆರ್ಥಿಕ ಜೀವನದ ಸಮಸ್ಯೆ ಪೆಡಂಭೂತವಾಗಿ ನಿಂತು ಬಾಳನ್ನೇ ಹಿಂಡಿ ನಿಸ್ಸರವಾಗಿರಿಸುವ ಬಗೆಯನ್ನು ಅವರ ಕೃತಿಯಲ್ಲಿ ಗ್ರಹಿಸಬಹುದು. ಕಾರಂತರು ಜೀವನವನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಿದ್ದಾರೆ ಎಂಬುವುದನ್ನು ನಾವಿಲ್ಲಿ ಗಮನಿಸಬೇಕು. ಕಾರಂತರದು ವಿಶಿಷ್ಟವಾದ ದಾರಿಯಾಗಿದೆ, ಅವರು ಯಾವ ಸಂಪ್ರದಾಯಕ್ಕೂ ಸೇರಿದವರಲ್ಲ ಅದಕ್ಕೂ ಹೆಚ್ಚಾಗಿ ಯಾವ ಸಂಪ್ರದಾಯವನ್ನು ನಿರ್ಮಿಸಲಿಲ್ಲ. ಇದಕ್ಕೆ ಕಾರಣವೆಂದರೆ ಅವರತೀರ ಸ್ವತಂತ್ರವಾದ ಮನೋವೃತ್ತಿಯೆನ್ನಬಹುದು. ಅವರ ಶೈಲಿ ಈ ಸ್ವತಂತ್ರ ದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ. ವಸ್ತುವಿನ ಗಟ್ಟಿತನವೊಂದನ್ನು ಬಿಟ್ಟರೆ ಬೇರೇನೂ ಅವರಲ್ಲಿಲ್ಲ. ಅದರಿಂದಾಗಿ ಪಾತ್ರಗಳು ತಾವಾಗಿಯೇ ಹುಟ್ಟಿಕೊಳ್ಳುತ್ತವೆ ಮತ್ತು ಭಾಷೆ ಸಜೀವತೆಯಿಂದ ಮೈತುಂಬಿಕೊಳ್ಳುತ್ತದೆ. ಕರ್ನಾಟಕದ ಮಹತ್ವದ ಅಂಗವಾದ ದಕ್ಷಿಣಕನ್ನಡ ಜಿಲ್ಲೆಗೆ ಒತ್ತುಕೊಟ್ಟು, ಅಲ್ಲಿ ಜನರು ನಡೆಸಿದ ಜೀವನದ ಹೋರಾಟಕ್ಕೆ ಸಾರ್ಥಕ ಅಭಿವ್ಯಕ್ತಿ ತಂದುಕೊಟ್ಟದ್ದು ಕಾರಂತರ ಕಾದಂಬರಿಗಳು. ಅವರ ಕಾದಂಬರಿಯ ಕಥಾನಕಗಳು ದಕ್ಷಿಣಕನ್ನಡ ಜಿಲ್ಲೆಯಿಂದ ಮುಂಬೈ ಮದ್ರಾಸ್ ದಿಲ್ಲಿಗಳವರೆಗೆ ಹೋಗುತ್ತವೆ. ಅಲ್ಲಿಂದ ಮರಳಿ ದಕ್ಷಿಣಕನ್ನಡ ಜಿಲ್ಲೆಗೆ ಮರಳುತ್ತವೆ. ಸಾಮಾಜಿಕ ಸತ್ಯವನ್ನು ತಿಳಿಗಣ್ಣಿನಿಂದ ನಿಚ್ಚಳವಾಗಿ ನೋಡುವ ವಸ್ತುನಿಷ್ಠೆತೆ, ಚಿಕಿತ್ಸಕದೃಷ್ಟಿ ಅದರ ಜೊತೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿನ ಅಂಧಶ್ರದ್ಧೆ, ಕ್ರೌರ್ಯ, ಶೋಷಣೆಗಳ ಮೂಲಕ ನಿರ್ಮಾಣವಾಗಿರುವ

ಮಾನವೀಯ ದುಃಖಗಳ ಬಗ್ಗೆ ನಿರಂತರವಾಗಿ ಮಿಡಿಯುವ ಹೃದಯ ಅವರದ್ದು. ಸಹಜ ಸಂಯೋಗದಿಂದ ಮನುಷ್ಯನ ಹಲವಾರು ದುಃಖಗಳನ್ನು ಸಹಜವಾಗಿ ತೊಡೆದು ಹಾಕಬಹುದೆಂಬ ಆಶಯವು ಅವರ ಎಲ್ಲಾ ಕಾದಂಬರಿಗಳಲ್ಲಿ ಕಾಣಬಹುದು.

**ಪರಾಮರ್ಶನ ಗ್ರಂಥಗಳು**

1) ಮರಳಿ ಮಣ್ಣಿಗೆ– ಡಾ. ಶಿವರಾಮ ಕಾರಂತ, ಸ್ವಪ್ನ ಬುಕ್ ಹೌಸ್, ಬೆಂಗಳೂರು. 2001

2) ಅಳಿದ ಮೇಲೆ – ಡಾ. ಶಿವರಾಮ ಕಾರಂತ, ಸ್ವಪ್ನ ಬುಕ್ ಹೌಸ್, ಬೆಂಗಳೂರು. 2001

3) ಅದೇ ಊರು ಅದೇ ಮರ – ಡಾ. ಶಿವರಾಮ ಕಾರಂತ, ನವಕರ್ನಾಟಕ, ಬೆಂಗಳೂರು. 2001

4) ಶಿವರಾಮ ಕಾರಂತ – ಮಾಲೀನಿ ಮಲ್ಯ, ನವಕರ್ನಾಟಕ, ಬೆಂಗಳೂರು. 2006

5) ಶಿವರಾಮ ಕಾರಂತ – ಗೋಪಾಲ್, ನವಕರ್ನಾಟಕ, ಬೆಂಗಳೂರು. 2006